**ಓ.ಎಸ್.ನಂ. 78/2017**

**ಪಿ.ಡಬ್ಲ್ಯು: 1**

ದಿನಾಂಕ: 18-01-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಎಸ್ ಎನ್ ಎ ಪ್ರತಿವಾದಿ ಪರ ವಕೀಲರಿಂದ:-**

ನಿಪಿ-14 ಸ್ವತ್ತು ನನ್ನ ಅಣ್ಣನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸಿ ಟಿ ಸಗುಣಪ್ಪ ನನ್ನ ತಮ್ಮ. ಸದರಿ 3 ನೇ ಪ್ರತಿವಾದಿ ಐಟಂ ನಂ.7 ರ ಸ್ವತ್ತಿನ ಮೇಲೆ ಬ್ಯಾಂಕಿಗೆ ಆಧಾರ ಮಾಡಿ ಸಾಲ ಪಡೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಔಥಣಹಳ್ಳಿ ಗ್ರಾಮದ ಸ.ನಂ. 4/5 ಮತ್ತು ಗೊಲ್ಲರಹಳ್ಳಿ ಗ್ರಾಮದ ಸ.ನಂ. 13/2 ತಿಮ್ಮಯ್ಯರವರಿಗೆ ಸೇರಿದ್ದ ಸ್ವತ್ತು ಎಂದರೆ ಸರಿ. ಪ್ರತಿವಾದಿ ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆಂದು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತಿನಲ್ಲಿ ಔಥಣಹಳ್ಳಿ ಗ್ರಾಮದ ಸ.ನಂ. 4/5 ಮತ್ತು ಗೊಲ್ಲರಹಳ್ಳಿ ಗ್ರಾಮದ ಸ.ನಂ. 13/2 ಸೇರಿಸಿಲ್ಲ ಎಂದರೆ ಸರಿ. ಕಡೂರು ಟೌನ್ ಗೆ ಸೇರಿದ ಅಸೆಸ್ಮೆಂಟ್ ನಂ. 26211/355, 35 x 63 ವಿಸ್ತೀರ್ಣ ಮಂಗಳೂರು ಹಂಚಿನ ಮನೆ ತಿಮ್ಮಯ್ಯ ರವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಅದೇ ರೀತಿ 531/412, 50 x 83 ಸ್ವತ್ತು ಸಹ ತಿಮ್ಮಯ್ಯ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನಿಡಿ-1 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಡಿ-1 ಸ್ವತ್ತನ್ನು ಮೊಹಮ್ಮದ್ ಹನೀಪ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . 1994 ರಲ್ಲಿ ನನ್ನ ತಂದೆ ಬದುಕಿರಲಿಲ್ಲ. ಆ ಸಮಯದಲ್ಲಿ ನಾನು ಮತ್ತು ನನ್ನ ಸಹೋದರರು ಒಟ್ಟಿಗೆ ಇದ್ದೆವು ಎಂದರೆ ಸರಿ. 1994 ರಲ್ಲಿ ನಾನು ಮನೆಯಲ್ಲೇ ಇದ್ದೆ ಮತ್ತು ಬೇರೆ ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ. 1994 ರಲ್ಲಿ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ.

ಫಾರುಕ್ ಬಿನ್ ಮೊಹಮ್ಮದ್ ಹನೀಪ್ ರವರಿಗೆ ಎಮ್ಮೆದೊಡ್ಡಿ ಗ್ರಾಮದ ಸ.ನಂ. 90 ರ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರು ಮಂಜಪ್ಪ ಎಂದು ಇದ್ದರು ಸಹ ಅದನ್ನು ಭೀಮರಾಜು ಎಂದು ತಿದ್ದುಪಡಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಭೀಮರಾಜು ರವರನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಭೀಮರಾಜು ರವರಿಗೆ ಬರುವ ಹಿಸ್ಸೆಯಲ್ಲಿ ಅಕ್ರಮವಾಗಿ ಪಡೆಯಲು ಆತ ನನ್ನ ಗಂಡ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಡಿರುವ ಕ್ರಯಪತ್ರಗಳಲ್ಲಿ ನನ್ನ ಗಂಡನ ಹೆಸರು ಮಂಜಪ್ಪ ಎಂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಡ್ಡ ಹೆಸರನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ದೋಗೆಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಂಜಪ್ಪ ಎಂದು ವಿದ್ಯಾಭ್ಯಾಸ ಮಾಡಿದ್ದರು ಎಂದು ನನಗೆ ತಿಳಿದಿಲ್ಲ. ಮಂಜಪ್ಪ ರವರು ದೋಗೆಹಳ್ಳಿಯಲ್ಲಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ ಹಾಗು ಅವರೇ ನನ್ನ ಪತಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗ ಬೇಡ ಎಂದು ಮೌಖಿಕವಾಗಿ ತಿಳಿಸಿದ್ದೆ ಎಂದರೆ ಸರಿಯಲ್ಲ.

ನಾನು ವಿಭಾಗ ಕೇಳುವುದಿಲ್ಲವೆಂದು ಭರವಸೆ ನೀಡಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಹಿಸ್ಸೆ ಪಡೆಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-14 ಅನ್ನು ಈ ದಾವೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಲು ನಿಪಿ-1 ರಿಂದ ನಿಪಿ-14 ಅನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

**ಸಹಿ/-**
**2 ನೇ.ಹೆ.ಪ್ರ:ದ:ನ್ಯಾ:ದಂ.,ರವರು,**
**ಕಡೂರು.**